# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ.

ಸಿ.ಸಿ.ನಂ.**19/2025**

1) ಕರ್ನಾಟಕ ಸರಕಾರ
   ಸಾವಳಗಿ ಪೋಲಿಸ ಠಾಣೆ ....ಫಿರ್ಯಾದಿದಾರ

– ವಿರುದ್ಧ –

1) 4 ನೇ ಆರೋಪಿಃ ಸಾಹೇಬಲಾಲ ತಂದೆ ಇಸ್ಮಾಲ್ ಮೊಘಲ್,
   ವಯಸ್ಸುಃ 38 ವರ್ಷ, ಉದ್ಯೋಗಃ ಕೂಲಿ,
   ಸಾಃ ಗದ್ಯಾಳ, ತಾಃ ಜಮಖಂಡಿ.

....ಆರೋಪಿ

ಃ ಆಪಾದನೆಯ ಸಾರಾಂಶ ಃ

ನಾನು ಶ್ರೀ.ರಾಜಶೇಖರ ಎಸ್. ಹರಸೂರ, ಬಿ.ಎ. ಎಲ್.ಎಲ್.ಬಿ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜಮಖಂಡಿ, ಈ ಮೇಲೆ ನಮೂದಿಸಿದ ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ಆಪಾದನೆ ಇರುತ್ತದೆ ಎಂದು ತಿಳಿಸುತ್ತಿದ್ದೇನೆಃ

ದಿನಾಂಕ 25.11.2024 ರಂದು 18.00 ಗಂಟೆಗೆ ಜಮಖಂಡಿ-ಸಾವಳಗಿ ರಸ್ತೆ ಮೇಲೆ 4 ನೇ ಆರೋಪಿಯಾದ ನೀವು ನಿಮ್ಮ ಮಾಲಿಕತ್ವದ ಹೀರೋ ಸ್ಪ್ಲೆಂಡರ್ ಮೋಟಾರ ಸೈಕಲ್ ನೋಂದಣಿ ಸಂಖ್ಯೆ ಕೆಎ-10/ಎಸ್-0913 ಈ ವಾಹನವನ್ನು ಚಾಲನಾ ಪತ್ರ ಹೊಂದದೇ ಇರುವ 2 ನೇ ಆರೋಪಿಗೆ ಚಲಾಯಿಸಲು ಅನುಮತಿ ನೀಡಿದ್ದು, ಈ ಮೂಲಕ ಮೋಟಾರು ವಾಹನ ಅಧಿನಿಯಮ ಕಲಂ.180 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ, ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು ನಿಮ್ಮ ಮಾಲಿಕತ್ವದ ಹೀರೋ ಸ್ಪ್ಲೆಂಡರ್ ಮೋಟಾರ ಸೈಕಲ್ ನೋಂದಣಿ ಸಂಖ್ಯೆ ಕೆಎ-10/ಎಸ್-0913 ಈ ವಾಹನವನ್ನು ವಿಮೆ ಮಾಡಿಸದೇ, 2 ನೇ ಆರೋಪಿಗೆ ಚಲಾಯಿಸಲು ಕೊಟ್ಟಿದ್ದು, ಈ ಮೂಲಕ ಮೋಟಾರು ವಾಹನ ಅಧಿನಿಯಮ ಕಲಂ.196 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ, ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪದ ಸಾರಾಂಶ ತಿಳಿಯಿತೇ ?

ಉತ್ತರಃ- ತಿಳಿಯಿತು.

ಪ್ರಶ್ನೆ-2) ಸದರಿ ಆರೋಪದ ಸಾರಾಂಶವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೊ ?

ಉತ್ತರಃ- ತಪ್ಪು ಒಪ್ಪುತ್ತೇನೆ.

ಮೇಲೆ ಹೇಳಲಾದ ಆರೋಪದ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.10.08 11:11:52 +0530

ಸ್ಥಳಃ- ಜಮಖಂಡಿ.
ದಿನಾಂಕಃ-06.10.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.